

# ಪ್ರಾರ್ಥನೆ

## ಸ್ವಾಮಿ ವಿವೇಕಾನಂದ ವಿರಚಿತ ಶಿವಸ್ತುತಿಯಿಂದ

ಜನಕಜನಿತಭಾವೋ ವೃತ್ತಯಃ ಸಂಸ್ಕೃತಾಶ್ಚ
ಅಗಣನಬಹುರೂಪೋ ಯತ್ರ ಏಕೋ ಯಥಾರ್ಥಃ ।
ಶಮಿತವಿಕೃತಿವಾತೇ ಯತ್ರ ನಾಂತರ್ಬಹಿಶ್ಚ
ತಮಹಹ ಹರಮೀಡೇ ಚಿತ್ತವೃತ್ತೇರ್ನಿರೋಧಮ್ ॥

ಎಲ್ಲಿ ಜನಕ-ಜನಿತಭಾವ, ಪರಿಶುದ್ಧವಾದ ವೃತ್ತಿಗಳು ಮತ್ತು ಅಗಣಿತವಾದ ರೂಪಗಳು ಒಂದೇ ಸತ್ಯದಲ್ಲಿ ಏಕವಾಗುವುವೊ, ಎಲ್ಲಿ ಒಳಗೆ ಹೊರಗೆ ಎಂಬ ಭಾವ ಕೊನೆಗಾಣುವುದೊ, ಪ್ರವೃತ್ತಿಗಳೆಂಬ ಅಲೆಗಳು ಎಲ್ಲಿ ಶಾಂತವಾಗುವುವೊ ಅಂತಹ ಚಿತ್ತವೃತ್ತಿಯನ್ನು ನಿರೋಧಿಸುವ ಹರನನ್ನು ನಾನು ಸ್ತುತಿಸುವೆನು.

ಗಲಿತತಿಮಿರಮಾಲಃ ಶುಭ್ರತೇಜಃಪ್ರಕಾಶಃ
ಧವಲಕಮಲಶೋಭಃ ಜ್ಞಾನಪುಂಜಾಟ್ಟಹಾಸಃ ।
ಯಮಿಜನಹೃದಿಗಮ್ಯೋ ನಿಷ್ಕಲಂ ಧ್ಯಾಯಮಾನಃ
ಪ್ರಣತಮವತು ಮಾಂ ಸಃ ಮಾನಸೋ ರಾಜಹಂಸಃ ॥

ತಿಮಿರಮಾಲೆ ಯಾರಲ್ಲಿ ಜಾರಿಹೋಗಿರುವುದೋ, ಶುಭ್ರತೇಜಃಪ್ರಕಾಶನಾಗಿ ಧವಳಕಮಲದಂತೆ ಯಾರು ಶೋಭಿಸುತ್ತಿರುವನೊ, ಯಾರ ಅಟ್ಟಹಾಸವು ಜ್ಞಾನವನ್ನು ಪ್ರಚೋದಿಸುವುದೊ, ಯಾರನ್ನು ನಿರಂತರ ಧ್ಯಾನದಿಂದ ತಮ್ಮ ಹೃದಯಾಂತರಾಳದಲ್ಲಿ ಜ್ಞಾನಿಗಳು ತಿಳಿದುಕೊಂಡಿರುವರೊ ಅಂತಹ ಮಾನಸಸರೋವರದಲ್ಲಿ ವಿಹರಿಸುತ್ತಿರುವ ಪರಮ ಶಿವನೆಂಬ ರಾಜಹಂಸವು ಪ್ರಣತನಾದ ನನ್ನನ್ನು ರಕ್ಷಿಸಲಿ.

ದುರಿತದಲನದಕ್ಷಂ ದಕ್ಷಜಾದತ್ತದೋಷಂ
ಕಲಿತಕಲಿಕಲಂಕಂ ಕಮ್ರಕಹ್ಲಾರಕಾಂತಮ್ ।
ಪರಹಿತಕರಣಾಯ ಪ್ರಾಣವಿಚ್ಛೇದಪ್ರೀತಂ
ನತನಯನ ನಿಯುಕ್ತಂ ನೀಲಕಂಠಂ ನಮಾಮಃ ॥

ಯಾರು ನಮ್ಮ ದುರಿತಗಳನ್ನು ಪರಿಹರಿಸುವುದರಲ್ಲಿ ದಕ್ಷನೋ, ಯಾರಿಗೆ ದಕ್ಷ ತನ್ನ ಮಗಳನ್ನು ಕೊಟ್ಟನೊ, ಯಾರು ಕಲಿಕಲಂಕವನ್ನು ಹೋಗಲಾಡಿಸುವನೊ, ಯಾರು ಬಿಳಿನ್ನೈದಿಲೆಯಂತೆ ಸುಂದರನಾಗಿರುವನೊ, ಯಾರು ಮತ್ತೊಬ್ಬರ ಹಿತಕ್ಕಾಗಿ ಸದಾ ತನ್ನ ಪ್ರಾಣವನ್ನು ಕೊಡಲು ಸಿದ್ಧನಾಗಿರುವನೊ, ಯಾರ ಕೃಪಾದೃಷ್ಟಿ ದೀನರ ಮೇಲೆ ಇರುವುದೊ ಅಂತಹ ನೀಲಕಂಠನಿಗೆ ನಮಸ್ಕರಿಸುತ್ತೇವೆ.

# ಸೂಕ್ತಿಪ್ರಭ



- ಸಂಕಲ್ಪವೇ ಶಕ್ತಿ. ಯಾರು ಪ್ರಚಂಡ ಇಚ್ಛಾಶಕ್ತಿಯ ಅಧಿಕಾರಿಯೋ ಅವರು ಒಂದು ಕಾಂತಿಯಿಂದ ಪರಿವೃತರಾದವರಂತೆ, ಉಳಿದೆಲ್ಲರನ್ನೂ ತಮ್ಮ ಮಾನಸಿಕ ಸ್ಥಿತಿಗೆ ತರುವರು.
- ಒಮ್ಮತವೇ ಸಮಾಜಶಕ್ತಿಯ ರಹಸ್ಯ. ದ್ರಾವಿಡ, ಆರ್ಯ, ಬ್ರಾಹ್ಮಣ, ಬ್ರಾಹ್ಮಣೇತರ ಎಂಬ ಪ್ರಶ್ನೆಯ ಮೇಲೆ ನೀವು ಹೋರಾಡಿದಷ್ಟೂ, ಭವಿಷ್ಯ ಭಾರತ ನಿರ್ಮಾಣಕ್ಕೆ, ಮಾಡಬೇಕಾದ ಶಕ್ತಿಸಂಗ್ರಹಕ್ಕೆ ದೂರವಾಗುತ್ತೀರಿ. ಇದನ್ನು ಗಮನದಲ್ಲಿಡಿ. ಭವಿಷ್ಯ ಭಾರತ ಸಂಪೂರ್ಣವಾಗಿ ಇದರ ಮೇಲೆ ನಿಂತಿದೆ.
- ಬರುವ ಐವತ್ತು ವರ್ಷಗಳವರೆಗೆ ಈ ಮಾತೃಭೂಮಿಯೇ ನಮ್ಮ ಆರಾಧನೆಯ ಇಷ್ಟದೈವವಾಗಬೇಕು. ಇನ್ನುಳಿದ ವ್ಯರ್ಥ ದೇವತೆಗಳೆಲ್ಲ ಕೆಲವು ಕಾಲ ನಮ್ಮಿಂದ ಮರೆಯಾಗಲಿ. ಜಾಗ್ರತನಾಗಿರುವ ದೇವರು ಇದೊಂದೇ, ಇದೇ ನಮ್ಮ ಜನಾಂಗ.
- ನಾವಿನ್ನೂ ವ್ಯಕ್ತಿಗಳಾಗಿಲ್ಲ. ವ್ಯಕ್ತಿತ್ವಕ್ಕಾಗಿ ಪ್ರಯತ್ನಿಸುತ್ತಿರುವೆವು. ಅದೇ ಅನಂತತೆ. ಅದೇ ಮಾನವನ ನೈಜ ಸ್ವರೂಪ. ಯಾರ ಜೀವನವು ಇಡೀ ವಿಶ್ವದಲ್ಲಿ ನೆಲೆಸಿದೆಯೋ ಅವನೇ ಜೀವಿಸುತ್ತಿರುವನು. ನಾವು ಅಲ್ಪ ವಸ್ತುಗಳ ಬಗೆಗೆ ಹೆಚ್ಚಾಗಿ ಚಿಂತಿಸಿದಷ್ಟೂ ಮೃತ್ಯುವಿನ ಕಡೆಗೆ ಭರದಿಂದ ಧಾವಿಸುವೆವು.
- ಪ್ರೇಮವು ಒಂದುಗೂಡಿಸುತ್ತದೆ, ಐಕ್ಯತೆಗೆ ಕಾರಣವಾಗುತ್ತದೆ. ತಾಯಿಯು ಮಕ್ಕಳೊಂದಿಗೆ, ಮನೆಗಳು ನಗರದೊಂದಿಗೆ, ಇಡೀ ವಿಶ್ವವು ಜೀವಿಗಳೊಂದಿಗೆ ಒಂದಾಗುತ್ತದೆ. ಪ್ರೇಮವೇ ಅಸ್ತಿತ್ವ. ಅದೇ ಪ್ರತ್ಯಕ್ಷ ದೇವರು.
- ಆತ್ಮನಿಗೆ ಅಸಾಧ್ಯವಾದುದು ಏನಾದರೂ ಇದೆ ಎಂದು ಎಂದೂ ತಿಳಿಯಬೇಡಿ. ಹಾಗೆ ಹೇಳುವುದೇ ನಾಸ್ತಿಕತೆ. ಪಾಪವೇನಾದರೂ ಇದ್ದರೆ, ನೀವು ನಿರ್ಬಲರೆಂದೂ, ಉಳಿದವರು ನಿರ್ಬಲರೆಂದೂ ಹೇಳುವುದೇ ಮಹಾಪಾಪ.

– ಸ್ವಾಮಿ ವಿವೇಕಾನಂದ

